ಅಸಲು ದಾವಾ ನಂ.16/2016

**ಪಿ.ಡಬ್ಲ್ಯೂ-3.ಸಿದ್ದಾರೂಢ ತಂದೆ ಅಮರಪ್ಪ ವಾನಕೆ, ಸಾಃ ಕಮಲಾಪೂರ.**

**ಸಾಕ್ಷಿಯನ್ನು ಇಂದು ದಿನಾಂಕಃ 18-01-2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಎ.ಸಿ.ಟಿ. ವಕೀಲರಿಂದ.**

ವಾದಿ ನನ್ನ ಸ್ವಂತ ಅಣ್ಣ. ನನ್ನ ಅಣ್ಣ ವಾದಿ ಯಾರ ಹತ್ತಿರ ಖರೀದಿ ಮಾಡಿರುತ್ತಾರೆ ಎಂದು ಹಾಗೂ ಮನೆ ನಂಬರ ನನಗೆ ಗೊತ್ತಿಲ್ಲ. ನನ್ನ ಅಣ್ಣ ಖರೀದಿ ಮಾಡಿದ ಜಾಗ ದಕ್ಷಿಣದಿಂದ - ಉತ್ತರ ಉದ್ದ 50 ಫೀಟ 6 ಇಂಚು ಪೂರ್ವ – ಪಶ್ಚಿಮ ಅಗಲ 15 ಫೀಟ ಇರುತ್ತದೆ. ನನ್ನ ಅಣ್ಣ ಖರೀದಿ ಮಾಡಿದ ಜಾಗ ಖುಲ್ಲಾ ಜಾಗ ಎಂದರೆ ಸರಿ. ಸದರಿ ಖುಲ್ಲಾ ಜಾಗದಲ್ಲಿ ಎರಡು ಅಂಗಡಿಗಳನ್ನು ಕಟ್ಟಿ ಟೇಲರ ಗಳಿಗೆ ಬಾಡಿಗೆ ನೀಡಿರುತ್ತಾನೆ ಎಂದರೆ ಸಾಕ್ಷಿಯು ಅದು ಸ್ವಂತ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ಉಳಿದ ಜಾಗ ಈಗಲೂ ಖಾಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಹನೀಫಸಾಬ ರವರ ಅಣ್ಣನ ಜಾಗ ಇರುತ್ತದೆ ಎಂದರೆ ಸರಿ. ಹನೀಫಸಾಬ ರವರ ಜಾಗದ ಪೂರ್ವಕ್ಕೆ ಜಾಫರಸಾಬರವರ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ ಚಂದ್ರಕಾಂತ ಬಂದಗಿರವರ ಮನೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಈಗ ಜಾಗ ಖರೀದಿ ಮಾಡಿರುತ್ತಾರೆ ಅದು ಜಾಫರಸಾಬರವರ ಜಾಗ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಮನೆ ಇದೆ ಎಂದರೆ ಸಾಕ್ಷಿಯು ಮನೆ ಇದೆ ರೋಡ ಆದ ನಂತರ ಅವರ ಮನೆ ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಗಳ ಹಳೆಯ ಮನೆ ಇರುತ್ತದೆ ಮನೆಯಾದ ನಂತರ ಸಾರ್ವಜನಿಕ ರಸ್ತೆ ಇರುತ್ತದೆ ಎಂದರೆ ಸರಿ. ರೋಡ ಆದ ನಂತರ ಚಂದ್ರಶೇಖರ ಶಳಕೆ ರವರ ಮನೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮುಂದೆ ಉತ್ತರ ದಿಕ್ಕಿಗೆ ಪ್ರತಿವಾದಿಗಳ ಜಾಗವಿತ್ತು ಎಂದರೆ ಸರಿ ಅಲ್ಲ. ಸಾಕ್ಷಿಯು ರಸ್ತೆ ಇದೆ ಎಂದು ಹೇಳುತ್ತಾರೆ. ಪ್ರತಿವಾದಿಗಳು ತಮ್ಮ ಮನೆಯ ಹತ್ತಿರ ಅಂಗಡಿ ಕಟ್ಟುವ ಮುಂಚೆ ಅಂಬಲಗಾ ಗ್ರಾಮ ಪಂಚಾಯಿತಿಯಲ್ಲಿ ಪರವಾನಗಿ ಪಡೆದು ಕಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಸದರಿ ಪರವಾನಗಿ ಪಡೆಯುವಾಗ ವಾದಿಯು ತಕರಾರು ಹಾಕಿರುತ್ತಾನೆ ಎಂದರೆ ಸರಿ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ನಂತರ ಪರವಾನಗಿ ಕೊಟ್ಟಿರುತ್ತಾರೆ ಎಂದು ಸಾಕ್ಷಿಯು ಪರವಾನಗಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಿ.29.11.2015 ರಂದು ಪರವಾನಗಿ ನೀಡಿದ ನಂತರ ಅಂಗಡಿಗಳ ನಿರ್ಮಾಣ ಮಾಡುತ್ತಿರುವಾಗ ನರೋಣಾ ಪೋಲಿಸ ಠಾಣೆಯಲ್ಲಿ ವಾದಿ ದೂರು ಸಲ್ಲಿಸಿರುತ್ತಾನೆ ಎಂದರೆ ದೂರು ನೀಡಿರುವುದು ಸರಿ ಎಂದು ನುಡಿಯುತ್ತಾರೆ. ಪೋಲಿಸರು ಬಂದು ಸ್ಥಳ ಪರೀಶಿಲನೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಪೋಲಿಸರು ಸ್ಥಳ ಪರಿಶೀಲನೆ ಮಾಡಿ ದಾಖಲೆಗಳನ್ನು ಪರೀಶಿಲನೆ ಮಾಡಿ ಪ್ರತಿವಾದಿಗಳಿಗೆ ಅಂಗಡಿ ಕಟ್ಟಲು ಪರವಾನಗಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾರ್ವಜನಿಕ ರಸ್ತೆಯ ಮೇಲೆ ಮನೆಕಟ್ಟಲು ಯಾರು ಪರವಾನಗಿ ನೀಡುವುದಿಲ್ಲ ಎಂದರೆ ಸಾಕ್ಷಿಯು ರಸ್ತೆಯ ಮೇಲೆಯೆ ಮನೆ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ರಸ್ತೆಯ ಮೇಲೆ ಮನೆಕಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನಮ್ಮ ಖಾಲಿ ಜಾಗಕ್ಕೆ ಹೋಗಲು ದಾರಿ ಖರೀದಿದಾರರ ಬಳಿ ಕೇಳಬೇಕು ಎಂದರೆ ಸಾಕ್ಷಿಯು ಅದು ಸಾರ್ವಜನಿಕ ರಸ್ತೆ ಎಂದು ನಾವು ಖರೀದಿ ಮಾಡಿರುತ್ತೇವೆ ಪ್ರತಿವಾದಿಗಳು

ಸಾರ್ವಜನಿಕ ರಸ್ತೆಯ ಮೇಲೆ ಮನೆ ಕಟ್ಟಿರುವ ಕಾರಣ ಅವರಿಗೆ ಕೇಳುತ್ತಿದ್ದೆವೆ ಎಂದು ಹೇಳುತ್ತಾರೆ. ವಾದಿಯಾದ ನನ್ನ ಅಣ್ಣನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.